ಅನುದಾನ ರಹಿತ ಖಾಸಗಿ ಕಾಲೇಜುಗಳು

1) ನ್ಯೂ ಹಾರಿಜಾನ್ ಶಿಕ್ಷಣ ಕಾಲೇಜು, ಇಂದಿರಾನಗರ, ಬೆಂಗಳೂರು.

2) ಡಾ. ಅಂಬೇಡ್ಕರ್ ಶಿಕ್ಷಣ ಕಾಲೇಜು, ಬೆಂಗಳೂರು.

3) ಎಂ.ವಿ.ಜೆ. ಶಿಕ್ಷಣ ಕಾಲೇಜು, ಬೆಂಗಳೂರು.

4) ಕರ್ನಾಟಕ ತಿಗಳರ ವಿದ್ಯಾವರ್ಧಕ ಸಂಘದ ರಾಜಾಜಿನಗರ ಶಿಕ್ಷಣ ಕಾಲೇಜು, ಬೆಂಗಳೂರು.

5) ಸರ್ವಜ್ಞ ಶಿಕ್ಷಣ ಕಾಲೇಜು, ಬೆಂಗಳೂರು.

6) ಶ್ರೀ ಜಯಚಾಮರಾಜೇಂದ್ರ ಶಿಕ್ಷಣ ಸಂಸ್ಥೆಯ ಬಿ.ಎಡ್. ಕಾಲೇಜು, ಬೆಂಗಳೂರು.

7) ಸಂಜಯಗಾಂಧಿ ಶಿಕ್ಷಣ ಕಾಲೇಜು, ಬೆಂಗಳೂರು.

ಇ) 100 + 10 (ಸೇವೆಯಲ್ಲಿರುವ ಉಪಾಧ್ಯಾಯರುಗಳಿಗೆ ಖಾಸಲಾದ ಸೀಟುಗಳು)

ಈ) ಇಲ್ಲ.

ರೈತರ ಸಾಲ ಮನ್ನಾ ಮಾಡುವ ಬಗ್ಗೆ ಕುರಿತು

1631. ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೈತರ ಸಾಲ ಮತ್ತು ಬಡ್ಡಿ ಸೇರಿದಂತೆ ರೂ. 10,000-00 ಮಿತಿಯವರೆಗೆ ಪ್ರಸಕ್ತ ಸಾಲಿನಲ್ಲಿ ಮನ್ನಾ ಮಾಡಲು ಸರ್ಕಾರ ಯೋಚಿಸುತ್ತಿದೆಯೇ ;

ಆ) ಹಾಗಿದ್ದಲ್ಲಿ, ಯಾವಾಗ ;

ಇ) ಸಾಲಗಳನ್ನು ಮನ್ನಾ ಮಾಡಿದರೆ ರಾಜ್ಯದ ಬೊಕ್ಕಸಕ್ಕೆ ತಗಲುವ ಹೊರೆಯೆಷ್ಟು ?

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಕ್ಫ್ ಸಂಸ್ಥೆಯಿಂದ ಕಟ್ಟಲಾದ ವಾಣಿಜ್ಯ ಸಂಕೀರ್ಣಗಳ ಮತ್ತು ಉತ್ಪಾದಿಸಿದ ಫಂಡು.

1633. ಶ್ರೀ ಬಸವರಾಜ್ ರಾಯರೆಡ್ಡಿ (ಯಲ್ಬುರ್ಗಿ) : ಮಾನ್ಯ ಸಾರಿಗೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) 1985 ರಿಂದ ಈ ರಾಜ್ಯದಲ್ಲಿ ವಿವಿಧ ವಕ್ಫ್ ಸಂಸ್ಥೆಗಳು ಕಟ್ಟಿರುವ ವಾಣಿಜ್ಯ ಸಂಕೀರ್ಣಗಳು ಎಷ್ಟು ;

ಬಿ) ವರ್ಷಕ್ಕೆ ವಸೂಲಾದ ಬಾಡಿಗೆ ;

ಸಿ) ಯಾವ ಉದ್ದೇಶಕ್ಕಾಗಿ ಬಾಡಿಗೆಯಿಂದ ಬಂದ ಹಣವನ್ನು ಉಪಯೋಗಿಸಲಾಗಿದೆ ?

ಶ್ರೀ ಆಜೇಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) :

ಎ) ವಿವಿಧ ವಕ್ಫ್ ಸಂಸ್ಥೆಗಳು 1985 ರಿಂದ ಈ ರಾಜ್ಯದಲ್ಲಿ 23 ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಅದರಲ್ಲಿ. 8 ವಾಣಿಜ್ಯ ಸಂಕೀರ್ಣಗಳ ನಿರ್ಮಾಣ ಕಾರ್ಯವು ಸಂಪೂರ್ಣಗೊಂಡಿದೆ.

ಬಿ) 1) ಕರ್ನಾಟಕ ವಕ್ಫ್ ಕಛೇರಿ ಸಂಕೀರ್ಣ "ದಾರುಲ್ ಅವ್‌ಕಾಫ್ ಕಟ್ಟಡ" ಬೆಂಗಳೂರು ಇದರಿಂದ ವರ್ಷಕ್ಕೆ ರೂ. 10,30,960-00 ಬಾಡಿಗೆ ವಸೂಲಾಗುತ್ತಿದೆ.

2) ಬೇರೆ ಇತರೆ 7 ವಾಣಿಜ್ಯ ಸಂಕಿಣರ್ಣಗಳಿಂದ ವರ್ಷಕ್ಕೆ ಬಾಡಿಗೆ ಮೊತ್ತ ಕೂಡಲೇ ಲಭ್ಯವಿಲ್ಲ.

ಸಿ) 1) ಕರ್ನಾಟಕ ವಕ್ಫ್ ಕಛೇರಿಯ ಸಂಕೀರ್ಣವು ಕೇಂದ್ರ ವಕ್ಫ್ ಕೌನ್ಸಿಲ್‌ನಿಂದ ಪಡೆದ ಸಾಲದ ಜವಾಬ್ದಾರಿಯನ್ನು ತೀರಿಸಲಾಗುತ್ತಿದೆ. ಹಾಗೆಯೇ, ವಕ್ಫ್ ಸಂಕೀರ್ಣದ ನಿರ್ವಹಣೆ ಮತ್ತು ರಿಪೇರಿಗೆ ಮತ್ತು ಬೆಂಗಳೂರು ನಗರ ಮಹಾನಗರಪಾಲಿಕೆಗೆ ಕೊಡಬೇಕಾದ ಆಸ್ತಿ ತೆರಿಗೆಯನ್ನು ಈ ವರಮಾನದಿಂದ ಕೊಡಲಾಗುತ್ತಿದೆ.

2) ಇತರೆ 7 ವಾಣಿಜ್ಯ ಸಂಕೀರ್ಣಗಳು ಯಾವ ಕಾರ್ಯಗಳಿಗೆ ತಮ್ಮ ವಸೂಲಾದ ಬಾಡಿಗೆಯ ಹಣವನ್ನು ಉಪಯೋಗಿಸುತ್ತಿವೆ ಎಂಬುದು ಕೂಡಲೇ ಲಭ್ಯವಿಲ್ಲ.

ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಸೀಟುಗಳ ಮಾಸಲಾತಿ ಬಗ್ಗೆ

1636. ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸೀಟುಗಳನ್ನು ಹಂಚುವ ಸಂದರ್ಭದಲ್ಲಿ ಈಗಿರುವ ನಿಯಮಗಳಿಗನುಗುಣವಾಗಿ (ಮೆರಿಟ್ ಮೇಲೆ) ಸ್ಥಳೀಯ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸೀಟು ದೊರೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಶೇ. 50 ಸೀಟುಗಳನ್ನು ಸ್ಥಳೀಯ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ದೊರಕುವಂತೆ ಸರ್ಕಾರವು ಕ್ರಮ ಕೈಗೊಳ್ಳುವುದೇ ;

ಇ) ಹಾಗಿದ್ದಲ್ಲಿ ಯಾವಾಗ ಕೈಗೊಳ್ಳಲಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಇಲ್ಲ.